**ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ**

**ಎಂವಿಸಿ ಸಂಖ್ಯೆಃ 118/2019**

PW-1

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕಃ 11.12.2020**

**ಮುಖ್ಯವಿಚಾರಣೆ ಅರ್ಜಿದಾರರ ಪರ ಶ್ರೀ ಕೆ.ಎಸ್.ಆರ್, ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ವಿಷಯವಾಗಿ ನಾನು ನ್ಯಾಯಾಲಯದಲ್ಲಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ವಿಷಯಗಳನ್ನು ಓದಿಸಿ ತಿಳಿದುಕೊಂಡಿದ್ದು, ಆ ವಿಷಯ ಸರಿ ಹಾಗೂ ಸತ್ಯವಾಗಿರುತ್ತವೆ ಅಂತ ಒಪ್ಪಿ ಮನವರಿಕೆ ಮಾಡಿಕೊಂಡು ಪ್ರಮಾಣಪತ್ರಕ್ಕೆ ನನ್ನ ಸಹಿ ಮಾಡಿರುತ್ತೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ದೂರು, ಪ್ರಥಮ ವರ್ತಮಾನ ವರದಿ, ಕಲಂ 304(ಎ) ಅಳವಡಿಸಿಕೊಳ್ಳಲು ತನಿಖಾಧಿಕಾರಿಗಳ ಕೋರಿಕೆ ಪತ್ರ, ಸ್ಥಳ ಪಂಚನಾಮೆ, ಗುನ್ನೆ ಸ್ಥಳದ ಕಚ್ಚಾನಕ್ಷೆ, ವಾಹನ ತಪಾಸಣಾ ವರದಿ, ಶವ ಪಂಚನಾಮೆ ವರದಿ, ಮರಣೋತ್ತರ ಪರೀಕ್ಷಾ ವರದಿ, ಮತ್ತು ದೋಷಾರೋಪಣಾ ಪತ್ರ ಇವುಗಳ ನಕಲು ಪ್ರತಿಗಳನ್ನು ಹಾಜರು ಮಾಡಿದ್ದು ಕ್ರಮವಾಗಿ **ನಿಪಿ-1 ರಿಂದ 9** ಎಂದು ಗುರುತಿಸಲಾಯಿತು. ಮೃತರ ಕುಟುಂಬ ಜೀವಂತ ಸದಸ್ಯರ ಪತ್ರ, ವರ್ಗಾವಣೆ ಪ್ರಮಾಣಪತ್ರ, ಒಟ್ಟು 10 ಬಿಲ್ಲುಗಳು ಇವುಗಳನ್ನು ಹಾಜರು ಮಾಡಿದ್ದು, ಅವುಗಳನ್ನು ಕ್ರಮವಾಗಿ **ನಿಪಿ-10 ರಿಂದ 12** ಎಂದು ಗುರುತಿಸಲಾಯಿತು. ನನ್ನ ಹಾಗೂ ನನ್ನ ಗಂಡನ ಆಧಾರ್ ಕಾರ್ಡು ಇವುಗಳ ನೋಟರಿಕೃತ ಪ್ರತಿಗಳನ್ನು ಹಾಜರು ಮಾಡಿದ್ದು, ಅವುಗಳ ಮೂಲ ದಾಖಲೆಗಳನ್ನು ಇಂದು ಹಾಜರು ಮಾಡಿದ್ದು ನೋಟರಿಕೃತ ಪ್ರತಿಗಳನ್ನು ಮೂಲ ದಾಖಲೆಗಳೊಂದಿಗೆ ಹೊಲಿಸಿ ನೋಡಿ ನೋಟರಿಕೃತ 2 ಆಧಾರ್ ಕಾರ್ಡುಗಳನ್ನು **ನಿಪಿ-13** ಹಾಗೂ **14** ಎಂದು ಗುರುತಿಸಲಾಯಿತು.

(2 ಮೂಲ ಆಧಾರ್ ಕಾರ್ಡುಗಳನ್ನು ಸಾಕ್ಷಿಗೆ ವಾಪಸ್ಸು ಕೊಡಲಾಯಿತು)

**<u>ಪಾಟೀಸವಾಲು 2 ನೇ ಎದುರುದಾರರ ಪರ ಶ್ರೀ ಕೆ.ಡಿ.ಡಿ, ವಕೀಲರಿಂದಃ</u>**

3. ನಮಗೆ 3 ಜನ ಮಕ್ಕಳು ಎಂದರೆ ಶ್ವೇತಾ, ರಾಜೇಶ್ ಮತ್ತು ರಾಕೇಶ್. ರಾಜೇಶ್ ಈತನು 7 ನೇ ತರಗತಿಯವರೆಗೆ ಓದಿದ್ದ. ರಾಜೇಶ್ ಈತನ ಜನ್ಮ ದಿನಾಂಕ ಗೊತ್ತಿಲ್ಲ. ಅಪಘಾತವಾದಾಗ ರಾಜೇಶನಿಗೆ 20 ವರ್ಷ ವಯಸ್ಸಾಗಿತ್ತು. ಆತನಿಗೆ 20 ವರ್ಷ ಆಗಿತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ರಾಜೇಶ್ ಈತನು ಮೋಹನ್ ಹತ್ತಿರ ಸಹಾಯಕ/ಕ್ಲೀನರ್ ಎಂದು ಕೆಲಸ ಮಾಡಲು ಹೋಗುತ್ತಿದ್ದ. ರಾಜೇಶ್ ಈತನು ಸಾಯುವ ಪೂರ್ವದಲ್ಲಿ 3, 4 ತಿಂಗಳಿನಿಂದ ಮೋಹನ್ ಹತ್ತಿರ ಕೆಲಸ ಮಾಡುತ್ತಿದ್ದ. ಆ ರೀತಿ ಕೆಲಸ ಮಾಡುವ ಬಗ್ಗೆ ದಾಖಲೆ ಇಲ್ಲ. ರಾಜೇಶ್ ಈತನು 15 ದಿನ ಅಥವಾ ತಿಂಗಳಿಗೊಮ್ಮೆ ಮನೆಗೆ ಬರುತ್ತಿದ್ದ. ರಾಜೇಶ್ ಈತನು ಮೋಹನ್ ಜೊತೆ ವಾಸ ಮಾಡುತ್ತಿದ್ದ. ನಾವೆಲ್ಲರೂ ಮುರ್ನಾಡು ಪಕ್ಕ ಹುದ್ದೂರು ಗ್ರಾಮದಲ್ಲಿ ವಾಸವಾಗಿರುತ್ತೇವೆ. ರಾಜೇಶನಿಗೆ ದಿನಕ್ಕೆ ರೂ.450/- ಸಂಬಳ ನೀಡುತ್ತಿದ್ದರು. ಆ ರೀತಿ ಸಂಬಳ ನೀಡುವ ಬಗ್ಗೆ ದಾಖಲೆ ಇಲ್ಲ. ರಾಜೇಶ್ ಈತನು ಮೋಹನ್ ಬಳಿ ಕೆಲಸ ಮಾಡುತ್ತಿರಲಿಲ್ಲ, ಆತನಿಗೆ ದಿನಕ್ಕೆ ರೂ.450/- ಸಂಬಳ ನೀಡುತ್ತಿರಲಿಲ್ಲ ಎಂದರೆ ಸುಳ್ಳು. ನನಗೆ ಮೋಹನ್ ಈತನ ಪರಿಚಯವಿಲ್ಲ. ಮೋಹನ್ ಏನು ಕೆಲಸ ಮಾಡುತ್ತಾನೆ ಎನ್ನುವುದು ಗೊತ್ತಿಲ್ಲ. ಅಪಘಾತ ಹೇಗೆ ಆಯಿತು ವಾಹನದಲ್ಲಿ ಎಷ್ಟು ಜನ ಇದ್ದರು ಎನ್ನುವುದರ ಬಗ್ಗೆ ನನಗೆ ಗೊತ್ತಿಲ್ಲ. ಅಪಘಾತವು ವಾಹನದ ಚಾಲಕನ ತಪ್ಪಿನಿಂದ ಆಯಿತು. ಅಪಘಾತ ಯಾವ ವಾಹನದಿಂದ ಆಯಿತು ಎನ್ನುವುದು ನನಗೆ ಗೊತ್ತಿಲ್ಲ. ನನ್ನ ಮಗ ರಾಜೇಶ್ ಈತನು ಮೋಹನ್ ಹತ್ತಿರ ಕೆಲಸ ಮಾಡುತ್ತಿದ್ದ, ಆತನಿಗೆ ದಿನಕ್ಕೆ ರೂ.450/- ಸಂಬಳ ನೀಡುತ್ತಿದ್ದರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನ ವೈದ್ಯಕೀಯ ಖರ್ಚು ರೂ.50,000/- ಆಯಿತೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಹೇಗೆ ಆಯಿತು ಎಂಬುದರ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ. ರಾಜೇಶ್ ಈತನು ಚಾಲಕನ ಪಕ್ಕ ಕುಳಿತಿದ್ದನು. ನಾನು ಸೃಷ್ಟಿಸಿದ ಸುಳ್ಳು ವೈದ್ಯಕೀಯ ಬಿಲ್ಲುಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರದ ಹಣ ಸಿಗಲೆಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು 1 ನೇ ಎದುರುದಾರರ ಪರಃ</u>**

ಶ್ರೀ ಎಂ.ಎಸ್.ಎನ್, ವಕೀಲರು 1 ನೇ ಎದುರುದಾರರ ಪರ ಮೇಲಿನ ಪಾಟೀಸವಾಲನ್ನು ಆಳವಡಿಸಿಕೊಳ್ಳುತ್ತೇನೆ ಎಂದು ತಿಳಿಸಿರುತ್ತಾರೆ.

**<u>ಮರುವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ